ವುದಕ್ಕೋಸ್ಕರ ನಾನು ಬಹಳ ದಿವಸಗಳ ಕೆಳಗೆ ಒಪ್ಪಿದ್ದರಿಂದ ಶಿವಮೊಗ್ಗಾಕ್ಕೆ ಹೋಗಬೇಕಾಗಿ ಬಂತು. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಥಿನಿಯರು ಬಂದಿದ್ದರು. ಆ ಸಂದರ್ಭದಲ್ಲಿ ಕೆಲವಾರು ವಿದ್ಯಾರ್ಥಿಗಳು ವಿದ್ಯಾಶುಲ್ಕವನ್ನು ಏರಿಸದೆ ಕಮ್ಮಿ ಮಾಡಬೇಕೆಂದು ಹೇಳಿದರು. ನಾನು ನಿಮಗೆ ಅದರಿಂದ ಇರತಕ್ಕ ತೊಂದರೆಗಳನ್ನು ಹೇಳಿ ಸುಮ್ಮನೆ ಗಲಾಟೆಗೆ ಅವಕಾಶಕೊಡುವುದು ಸಾಧುವಲ್ಲ. ಯೋಗ್ಯರೀತಿಯಿಂದ ಇದು ನಡೆಯಬೇಕು ಎಂದು ಹೇಳಿದೆ. ಆ ವಿಚಾರ ಮಾತ್ರ ನನಗೆ ಹೇಳಿ ಸಾಕು, ತಮ್ಮಲ್ಲಿ ನನಗೆ ಹೆಚ್ಚಿನ ಮಟ್ಟಿಗೆ ಸಹಾನುಭೂತಿ ಇದೆಯೆಂದು ಹೇಳಿದೆ. ಆಗ ಅದಕ್ಕೆ ಸಂಬಂಧಪಟ್ಟವರನ್ನು ಕರೆತನ್ನಿ ಎಂದು ಹುಡುಗ ಹುಡುಗಿಯರಿಗೆ ಹೇಳಿಕಳುಹಿಸಿದೆ. ಆಗ ಸಹಸ್ರಾರು ಜನ ಯುವಕರು, ವಿದ್ಯಾರ್ಥಿಗಳು ಕೂಗಾಡುವುದಕ್ಕೆಷುರು ಮಾಡಿ, ಹೆಚ್ಚು ಗಲಾಟೆ ಮಾಡಿ ನನ್ನ ಕಾರಿನ ಮೇಲೆ ಕಲ್ಲುಗಳನ್ನು ಹಾಕಿದರು. ಆದರೆ ನನಗೇನೂ ಆಗಲಿಲ್ಲ. ಇಂಥಾದ್ದು ಎಷ್ಟೋ ಸಾರಿ ಆಗಿದೆ. ಹೀಗೆಯೇ ಶಂಕುಸ್ಥಾಪನಾನಛೆ ನಡೆಯುತ್ತಿರುವಾಗಲೇ ಹೊರಗಡೆ ಈ ಮಂತ್ರಿಮಂಡಲಕ್ಕೆ ಧಿಕಾರ ಎಂಬುದಾಗಿ ಕೂಗುತ್ತಾ ಇದ್ದರು. ಆದರೆ ಶ್ರೀಮಾ‍ ಕಂಠಿಯವರಿಗೆ ಬಹಳವಾಗಿ ಬೈದರು. ಅದಾದನಂತರ ಹೊರಗೆ ಬರುವಾಗ ಬಹಳ ಗಲಾಟೆಮಾಡಿ ವಿಶೇಷ ದಾಂಧಲೆ ಎಬ್ಬಿಸಿ ಕಲ್ಲುಗಳನ್ನು ತೂರಿದರು. ಬಹಳ ಕಷ್ಟದಿಂದ ಪ್ರಯಾನ ಪಟ್ಟು ಪೋಲೀಸಿನವರು ಮುಖ್ಯ ಮಂತ್ರಿಗಳು ಬರುತ್ತಾರೆಂದು ಪ್ರೊಜೆಕ್ಷ್ಟ ಏನೋ ಕೊಟ್ಟರು. ಹೊರಗೆ ಬಂದ ಕೂಡಲೆ ಕಲ್ಲಿನ ಸುರಿಮಳೆಯಿಂದ ಕಾರಿನ ಗಾಜು ಸಹ ಒಡೆದು ಹೋಯಿತು. ಕೆಲವರಿಗೆ ಗಾಯಗಳಾದುವು. ಆದಾಗ್ಯೂ ಅವರ ಇಂತಹ ಚಳುವಳಿಯಿಂದ ನನ್ನ ಮನಸ್ಸಿನ ಮೇಲೆ ಯಾವ ರೀತಿಯ ವಿರೋಧ ಪರಿಣಾಮವಾಗಲಿಲ್ಲ ವೆಂಬುದಾಗಿ ನಾನು ಇಲ್ಲಿ ಸ್ಪಷ್ಟ ಪಡಿಸುತ್ತೇನೆ. ಏಕೆಂದರೆ ವಿದ್ಯಾರ್ಥಿಗಳು ಖಂಡಿತ ಆ ರೀತಿ ಮಾಡಿಲ್ಲ. ಅವರ ಜೊತೆಗೆ ಕೆಲವರು ಗೂಂಡಾಗಳು ಸೇರಿದ್ದರು ಎಂದು ನನಗನ್ನಿಸುತ್ತದೆ. ಯಾವುದೋ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಅಂಟಿ ಸೋಷಿಯಲ್ ಎಲಿಮೆಂಟ್ಸ್ ರೂಪವಾಗಿ ಸಮಾಜ ಘಾತುಕ ವ್ಯಕ್ತಿಗಳು ಸಾಧಾರಣವಾಗಿ ಇಂತಹ ಸಂದರ್ಭಗಳನ್ನೇ ಉಪಯೋಗಿಸಿಕೊಂಡು ಅನೇಕ ದುರಂತಗಳಿಗೆ ಈಡುಮಾಡುವ ಪ್ರಸಂಗಗಳಿರುತ್ತವೆ; ಹಾಗೆ ಕೆಲವರು ಇದ್ದರೆಂದು ನನಗೆ ಭಾನವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ಮನಸ್ಸನ್ನು ಕಲಕಿಸುವ ಮತ್ತು ಕೆಡಿಸುವ ಜನರೂ ಸಹ ಕೆಲವರು ಅಲ್ಲಿ ಇದ್ದಾರೆ. ಆದ್ದರಿಂದ ಶಿವಮೊಗ್ಗಾದಲ್ಲಿ ನಡೆದಂಥ ಘಟನೆಗೆ ವಿದ್ಯಾರ್ಥಿಗಳೇ ಪೂರ್ತಿಯಾಗಿ ಜವಾಬ್ದಾರರು ಎಂದು ಹೇಳುವುದಕ್ಕೆ ನಾನು ಸಿದ್ಧನಾಗಿಲ್ಲ. ಈ ರೀತಿ ಯಾಗಿ ವಿದ್ಯಾರ್ಥಿಗಳ ಮನಸ್ಸನ್ನು ಕೆಡಿಸುತ್ತಾರಲ್ಲಾ ಎಂದು ನಾನು ಬಹಳ ವ್ಯಸನ ಪಡುತ್ತಿದ್ದೇನೆ. ವಿದ್ಯಾರ್ಥಿಗಳು ಬುದ್ಧಿವಂತರೇನೋ ಹೌದು. ಕಾಲೇಜಿನಲ್ಲಿ ಓದುತ್ತಿರುವುದರಿಂದ ಅವರು ತಮ್ಮ ಜವಾಬ್ದಾರಿ ಏನು ಎಂಬುದನ್ನು ತಕ್ಕ ಮಟ್ಟಿಗೆ ಅರಿತಿರುವವರು, ಆದರೂ ಶಿವಮೊಗ್ಗದ ಕೆಲವು ಜನ ಅಯೋಗ್ಯರ ಮಾತಿಗೆ ಎಡೆ ಕೊಟ್ಟರಲ್ಲಾ ಎಂದು ನನಗೆ ಬಹಳ ವ್ಯಸನವಾಗುತ್ತದೆ. ಅವರಿಗೆ ಚಿಕ್ಕವಯಸ್ಸಿನಲ್ಲಿ ವ್ಯವಹಾರ ಜ್ಞಾನ ಕಡಮೆಯಾಗಿರುವುದರಿಂದ ಅವರು ಈ ರೀತಿ ಮಾಡಿದ್ದಾರೆ. ಆದರೆ ಬೆಂಗಳೂರಿನ ವಿದ್ಯಾರ್ಥಿಗಳು ಬಹಳ ಶಾಂತಿಯುತವಾಗಿ ಮುಷ್ಕರ ಚಳುವಳಿಯನ್ನು ಮಾಡಿ ಒಂದು ತೀರ್ಮಾನವನ್ನು ನಿನ್ನೆಯ ದಿವಸ ಮಾಡಿದ್ದಾರೆ. ಇನ್ನು ಎರಡು ದಿವಸಗಳಲ್ಲಿ ನಾವು ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಅದನ್ನು ಅಬೆಯನ್ಸ್‌ನಲ್ಲಿಟ್ಟು ಆಜ್ಞೆಯನ್ನು ಸ್ವಾಗತ ಮಾಡುತ್ತೇವೆಂದು ಹೇಳಿದರು. ಇದಕ್ಕೆ ಬದಲಾಗಿ ಈಗಲೇ ಪೂರ್ತಿಯಾಗಿ ನಮ್ಮ ಚಳವಳಿಯನ್ನು ವಿತ್‌ಡ್ರಾ ಮಾಡುತ್ತೇವೆಂದು ವಿದ್ಯಾರ್ಥಿಗಳು ಹೇಳಿದ್ದರೆ ಅದು ಅವರ ಬುದ್ಧಿವಂತಿಕೆಯನ್ನು ಸೂಚಿಸುತ್ತಿತ್ತು, ಆ ರೀತಿ ಜಾಗ್ರತೆ ಯಾಗಿ ಮಾಡಲಿ ಎಂದು ನನ್ನ ಅಪೇಕ್ಷೆ. ಸರ್ಕಾರ ಎಂದೂ ವಿದ್ಯಾರ್ಥಿಗಳಿಗೆ ವಿರೋಧವಿಲ್ಲ. ಈಗ ಕಾಲೇಜುಫೀದರ ಜಾಸ್ತಿ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಈ ವಿಚಾರದಲ್ಲಿ ನನ್ನನ್ನು ಅನೇಕರು ಬಂದು ಕಂಡು ಹೋದಾಗ್ಗೆ ನಾನು ಅದನ್ನು ಇಳಿಸಬಹುದೇ ಎಂಬುದಾಗಿ ಮನಸ್ಸು ಮಾಡಿದುದೇ ನನ್ನಲ್ಲಿರತಕ್ಕ ಒಂದು weakness. ಆದರೂ ಅದನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ. ಕೆಲವು ಸಂದರ್ಭಗಳಲ್ಲಿ ಅನೇಕ ವಿಚಾರಗಳನ್ನು ಪೊರಬೇಕಾಗುತ್ತದೆ. ಈ ಬಗ್ಗೆ ನನ್ನ ಅಂತಃಕರಣ ಏನು ಇದ್ದರೂ ಸರ್ಕಾರದ ಆಡಳಿತವನ್ನು ನಡೆಸಬೇಕಾಗಿರುವುದರಿಂದ ಸರ್ಕಾರ ಏನೇನು ಕ್ರಮಗಳನ್ನು ಅನುಸರಿಸಬೇಕು ಮತ್ತು ರಾಜ್ಯದ ಆಡಳಿತ ಸುಗಮವಾಗಿ ನಡೆಯಬೇಕಾದರೆ ಯಾವ್ಯಾವ ವ್ಯವಸ್ಥೆಗಳನ್ನು ಸರಕಾರದವರು ಕೂಡಲೆ ಮಾಡಬೇಕೆಂಬುದು ಮುಖ್ಯ. ಎಲ್ಲಕ್ಕಿಂತಲೂ ಮುಖ್ಯವಾಗಿ ನನ್ನ ಸಹೋದ್ಯೋಗಿಗಳ ಸಹಕಾರದಿಂದ ಮಾತ್ರ ನಾನು ಈ ಸರ್ಕಾರದ ಆಡಳಿತವನ್ನು ನಡೆಸಿಕೊಂಡು ಹೋಗುತ್ತೇನೆ. ಹಿಂದೆ ಸರ್ಕಾರದವರು ಯಾವ ರೀತಿ ಗಡಿಯೋಜನೆ ತೀರ್ಮಾನಕ್ಕೆ ಬಂದಾಗ ಹಿಂದು ಮುಂದುನೋಡಿ ಒಂದು ಅಂತ್ಯ ತೀರ್ಮಾನವನ್ನು ಕ್ಯೆಗೊಂಡರೋ ಅದನ್ನು ಈಗ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಆದರೆ ಈ ವಿಚಾರಗಳಲ್ಲಿ ಅಂತಃಕರಣ ಏನು ಇದ್ದರೂ, ಇದು ರಾಜಕೀಯ ಕೆಲಸ. ಸರ್ಕಾರದ ಆಡಳಿತ ಸುಗಮವಾಗಿ ನಡೆಯಬೇಕಾಗಿದ್ದರೆ, ಸ್ವಲ್ಪ ಮಟ್ಟಿಗಾದರೂ ಆಡಳಿತದಲ್ಲಿ ಬಿಗಿಯಿರಬೇಕು. ಅಂತಹ ಒಂದು ಅವಕಾಶಕ್ಕೆ ದಾರಿ ಮಾಡಿಕೊಡಲು ವಿದ್ಯಾರ್ಥಿಗಳ ಹಿಂದಿದ್ದು ಆ ವಿದ್ಯಾರ್ಥಿಗಳನ್ನು ಯಾವುದೇ ರೀತಿಯಲ್ಲಾದರೂ ಮುಂದೆ ತರುವ ಕಾರ್ಯದಲ್ಲಿ ನಿರತರಾಗುವ ಜನಗಳು ಸ್ಪಷ್ಟವಾಗಿ ತಿಳಿದುಕೊಳ್ಳಲಿ ಎಂದು ನಾನು ಹೇಳುತ್ತೇನೆ, ಈ ರೀತಿಯಾಗಿ ಶಿವಮೊಗ್ಗದಲ್ಲಿ ವಿದ್ಯಾರ್ಥಿಗಳು ಒಂದು ಘಟನೆಯನ್ನು ನಡೆಸಿದರು. ಆದರೆ ಅದರಿಂದ ನನಗೆ ಯಾವ ರೀತಿಯಾದ ಪರಿಣಾಮವೂ ಉಂಟಾಗಲಿಲ್ಲವೆಂದು ನಾನು ಹೇಳುತ್ತೇನೆ.

5-30 P.M.

NON-OFFICIAL RESOLUTIONS

Steps to supply good and adequate drinking water to the Bangalore City from the river Cauvery alone to serve the needs of the City.

ಶ್ರೀ ಟಿ. ಮಾದಯ್ಯಗೌಡ (ರಾಮನಗರ).— ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನಲ್ಲಿರತಕ್ಕ ಈ ಕೆಳಗಿನ

(ಶ್ರೀ ಟಿ. ಮಾದಯ್ಯಗೌಡ)

ನಿರ್ಣಯವನ್ನು ನಾನು ಈ ಸಭೆಯ ಮುಂದೆ ಮಂಡಿಸುತ್ತೇನೆ:

"ಮುಖ್ಯ ನಗರವಾದ ಈ ಬೆಂಗಳೂರಿನ ಹೆಚ್ಚುತ್ತಿರುವ ಅವಶ್ಯಕತೆಗಳಿಗನುಗುಣವಾಗಿ ದೀರ್ಘಾವಧಿಯವರೆಗೆ ನೀರು ಸರಬರಾಜು ಮಾಡುವ ದೃಷ್ಟಿಯಿಂದ, ಸರ್ಕಾರದವರು ಬೆಂಗಳೂರು ನಗರಕ್ಕೆ ಕಾವೇರಿ ನದಿಯಿಂದಲೇ ಶುದ್ಧವಾದ ಕುಡಿಯುವ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

Mr. SPEAKER.—Resolution moved:

"This Assembly is of opinion that Government should take necessary steps to supply good and adequate drinking water to the Bangalore City from the river Cauvery alone so that it may serve the growing needs of this important city for a long time to come."

†ಶ್ರೀ ಟಿ. ಮಾದಯ್ಯಗೌಡ.—ಸ್ವಾಮಿ, ನಮ್ಮ ದೇಶಕ್ಕೆ ಬಹಳ ಪ್ರಾಮುಖ್ಯವಾದ ಬೆಂಗಳೂರು ನಗರದ ನೀರು ಸರಬರಾಜು ವಿಷಯವಾಗಿ ನಾನು ಈ ನಿರ್ಣಯವನ್ನು ಈ ಸಭೆಯಮುಂದೆ ತಂದಿದ್ದೇನೆ. ಈ ಬೆಂಗಳೂರು ಪಟ್ಟಣ ಸುಮಾರು ನಾಲ್ಕು ನೂರು ವರ್ಷಗಳ ಹಿಂದೆ ಪ್ರಖ್ಯಾತರಾದ ಕೆಂಪೇಗೌಡರಿಂದ ಸ್ಥಾಪಿಸಲ್ಪಟ್ಟಿತು. ಆಗ ಈ ಬೆಂಗಳೂರು ನಗರವನ್ನು ನಿರ್ಮಾಣ ಮಾಡುವುದರಲ್ಲಿ ಅದಕ್ಕೆ ಬೇಕಾದ ಸಲಕರಣೆಗಳನ್ನು ಕೊಡತಕ್ಕ ವಿಷಯವನ್ನು ಕೂಡ ಶ್ರೀಮಾನ್ ಕೆಂಪೇಗೌಡ ಅವರು ಗೊತ್ತುಮಾಡಿದ್ದರೆಂದು ಗೊತ್ತಾಗುತ್ತದೆ. ಬೆಂಗಳೂರಿಗೆ ಬೇಕಾದಂಥ ರಸ್ತೆಗಳನ್ನು ನಿರ್ಮಾಣಮಾಡಿ ಇಲ್ಲಿ ದೇವಸ್ಥಾನಗಳು ಬೇಕು, ಕೆರೆಗಳು ಬೇಕು, ನೀರಿನ ಸೌಕರ್ಯ ಇರಬೇಕು, ಯಾವ ಯಾವ ಪಂಗಡಗಳವರಿಗೆ ಏನೇನು ಕಸುಬು ಇರಬೇಕು ಎನ್ನುವುದನ್ನೆಲ್ಲಾ ಅವರೇ ಗೊತ್ತುಮಾಡಿದ್ದರೆಂದು ಕಾಣುತ್ತದೆ. ಹಾಗೆಯೇ ಬೆಂಗಳೂರಿಗೆ ಗಡಿಯನ್ನು ನಿರ್ಮಾಣಮಾಡಿ ನಾಲ್ಕು ದಿಕ್ಕಿನಲ್ಲಿಯೂ ಕೂಡ ನಾಲ್ಕು ಶಿಖರಗಳನ್ನು ಅವರೇ ನಿರ್ಮಿಸಿದ್ದರು ಎನ್ನುವಂಥಾದ್ದು ಕೂಡ ಈಗ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದೂ ಅಲ್ಲದೆ ಆಗಿನ ಕೋಚೆ ಕೊತ್ತಲು, ಅವರು ನಿರ್ಮಾಣ ಮಾಡಿರತಕ್ಕ ಕೆರೆಗಳು, ತಟಾಕಗಳು, ಉತ್ತಮವಾದ ದೇವಸ್ಥಾನಗಳು ಇವೆಲ್ಲವನ್ನು ನಾವು ಈಗಲೂ ಕೂಡ ನೋಡುತ್ತಿದ್ದೇವೆ. ಅವು ಈಗಿನ ಬೆಂಗಳೂರು ನಗರಕ್ಕೆ ಶೋಭಾಯಮಾನವಾಗಿವೆ. ಈ ಪಟ್ಟಣ ನಮ್ಮ ದೇಶಕ್ಕೆ ಬಹಳ ಪ್ರಾಮುಖ್ಯವಾದ ಪಟ್ಟಣ, ಒಳ್ಳೆಯ ವ್ಯಾಪಾರಸ್ಥಳ, ರೈಲ್ವೆ ಜಂಕ್ಷನ್ ಇದೆ. ನಾನಾಕಡೆಗಳಿಂದ ರಸ್ತೆಗಳು ಬಂದು ಸೇರುತ್ತವೆ. ಇಲ್ಲ ನೂರಾರು ಬಸ್ಸುಗಳು ಓಡಾಡುತ್ತವೆ. ಜನಸಂದಣಿ ವಿಪರೀತವಾಗಿ ಜಾಸ್ತಿಯಾಗುತ್ತಿದೆ. ಅಲ್ಲದೆ ಇಲ್ಲಿರತಕ್ಕ ಕೋರ್ಟುಗಳು ಕಚೇರಿಗಳು ವಿದ್ಯಾಲಯಗಳು, ಹಾಸ್ಪಟಲುಗಳು, ಹೊಟೇಲುಗಳು ಅಪರಿಮಿತವಾಗಿ ಬೆಳೆಯುತ್ತಿವೆ. ಇದು ಒಂದು ದೊಡ್ಡ ವ್ಯಾಪಾರಸ್ಥಳವಾಗಿರುವುದರಿಂದ ನೂರಾರು ಜನ ಇಲ್ಲಗೆ ಬಂದು ಹೋಗತಕ್ಕ ಜಾಗವಾಗಿದೆ. ಇಲ್ಲಿ ಎಲ್ಲಾ ಮತಸ್ಥರಿಗೂ ಸಂಬಂಧಪಟ್ಟ ದೇವಸ್ಥಾನಗಳು, ಚರ್ಚುಗಳು, ಮಸೀತಿಗಳು, ಬಸ್ತಿಗಳು ಎಲ್ಲವೂ ಕೂಡ ಏರ್ಪಾಡಾಗಿವೆ. ಈ ಪಟ್ಟಣವನ್ನು ಕಲ್ಯಾಣಪುರಿ ಎಂದೂ ನಮ್ಮ ಹಿರಿಯರು ಬಹಳ ಗೌರವದಿಂದ ಕರೆಯುತ್ತಿದ್ದಾರೆ. ಈ ಪಟ್ಟಣದಲ್ಲಿ ಒಳ್ಳೆಯ ಏರ್ ಕಂಡೀಷನ್ ಇದೆ. ಹವಾಗುಣ ಚೆನ್ನಾಗಿದೆ. ಇಲ್ಲಿಯ ಹವಾಗುಣ ಸಮಶೀತೋಷ್ಣವಾಗಿದೆ. ಒಳ್ಳೆಯ ಆರೋಗ್ಯಸ್ಥಳ ಅದಕ್ಕೋಸ್ಕರ ಬಹಳ ಜನ ಬೆಂಗಳೂರನ್ನು ಅಪೇಕ್ಷಿಸುತ್ತಾರೆ. ಭರತ ಖಂಡದಲ್ಲಿ ಇರತಕ್ಕ ಎಲ್ಲಾ ಪಟ್ಟಣಗಳಲ್ಲಿಯೂ ಇಲ್ಲದೆ ಇರತಕ್ಕ ಒಂದು ಸೌಕರ್ಯ ಈ ನಮ್ಮ ಬೆಂಗಳೂರಿನಲ್ಲಿದೆ. ಅಲ್ಲದೆ ಇತ್ತೀಚೆಗೆ ನಮ್ಮ ಕಾರ್ಪೊರೇಷನ್ನಿನವರೂ ಕೂಡ ಜನಗಳಿಗೆ ಮನೆಗಳ ಸೌಕರ್ಯ, ರಸ್ತೆಗಳ ಸೌಕರ್ಯ ಇತ್ಯಾದಿ ನಾನಾ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ. ಇದು ಸಾರ್ವಜನಿಕರಿಗೆ ಅತ್ಯುತ್ತಮವಾಗಿದೆ. ಈ ಕಾರಣಗಳಿಂದ ದಿನೇ ದಿನೇ ಬೆಂಗಳೂರು ಬಹಳ ದೊಡ್ಡದಾಗಿ ಬೆಳೆಯುತ್ತಾ ಬಂದಿದೆ. ಇಲ್ಲಿ ವಿದ್ಯುಚ್ಛಕ್ತಿ ಸೌಕರ್ಯ ಬಹಳ ಚೆನ್ನಾಗಿದೆ. ಆದ್ದರಿಂದ ನೂರಾರು ಸಣ್ಣ ಸಣ್ಣ ಕಾರ್ಖಾನೆಗಳಿವೆ. ಇಂಡಿಯಾ ಸರ್ಕಾರದವರು ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಈ ನಗರದಲ್ಲಿ ಸ್ಥಾಪನೆ ಮಾಡಿದ್ದಾರೆ. ಮೈಸೂರು ಸರ್ಕಾರದವರು ಸಹ ಅನೇಕ ಕಾರ್ಖಾನೆಗಳನ್ನು ಇಟ್ಟಿದ್ದಾರೆ. ಖಾಸಗೀ ಕಾರ್ಖಾನೆಗಳೂ ಬೇಕಾದಷ್ಟು ಇವೆ. ಜನಸಂದಣಿ ಇಲ್ಲಿ ವಿಪರೀತವಾಗಿ ಹೆಚ್ಚಿದೆ. ನಾನು ಚಿಕ್ಕಂದಿನಲ್ಲಿ ದ್ದಾಗ ಒಂದು ಸಾರಿ ಬೆಂಗಳೂರಿಗೆ ಬಂದಿದ್ದೆ. ಆಗ ಇಲ್ಲಿ ಜನಸಂಖ್ಯೆ ಒಂದು ಲಕ್ಷ ಆಥವಾ ಒಂದೂವರೆ ಲಕ್ಷವಿತ್ತು. ೧೯೪೬ನೇ ಇಸವಿಯ ಸೆನ್ಸಸ್ ಪ್ರಕಾರ ನಾಲ್ಕು ಲಕ್ಷ ಪ್ರಜಾಸಂಖ್ಯೆ ಇತ್ತು. ೧೯೫೧ರ ವೇಳೆಗೆ ಏಳು ಲಕ್ಷಕ್ಕೆ ಏರಿತು. ಒಂದಕ್ಕೆರಡರಷ್ಟು ಆಯಿತು. ಈಗ ೧೯೬೧ರ ವೇಳೆಗೆ ಹದಿಮೂರು ಲಕ್ಷ ಪ್ರಜಾಸಂಖ್ಯೆ ಆಗಿದೆ. ಪ್ರತಿ ದಿವಸವೂ ಬೆಂಗಳೂರಿಗೆ ಬಂದು ಹೋಗತಕ್ಕ ಜನಗಳ ಸಂಖ್ಯೆ ಮಿತಿಇಲ್ಲದಷ್ಟಿದೆ. ಏತಕ್ಕೆಂದರೆ ಇದು ಒಂದು ದೊಡ್ಡ ವ್ಯಾಪಾರಸ್ಥಳ. ಅನೇಕ ಜನಗಳು ವ್ಯಾಪಾರಕ್ಕಾಗಿ ಬರುತ್ತಾರೆ. ಕೋರ್ಟು ಕಛೇರಿಗಳಿಗೆ ಅನೇಕ ಜನ ಬಂದು ಹೋಗುತ್ತಾರೆ. ವಿಹಾರಕ್ಕೋಸ್ಕರ ಅನೇಕ ಜನ ಬಂದು ಹೋಗುತ್ತಾರೆ. ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿದೆ. ಹಿಂದೂಸ್ತಾನ್ ಏರ್‌ಕ್ರಾಫ್ಟ್, ಮೆಷೀನ್‌ಟೂಲ್ಸ್ ಫ್ಯಾಕ್ಟರಿ, ಟೆಲಿಫೋನ್ ಫ್ಯಾಕ್ಟರಿ, ಈ ರೀತಿ ನಾನಾವಿಧವಾದ ಫ್ಯಾಕ್ಟರಿಗಳಿವೆ. ಅವುಗಳಲ್ಲಿ ಕೆಲಸಮಾಡಲು ದೇಶದ ನಾನಾ ಮೂಲೆಗಳಿಂದ ಜನ ಬಂದು ಸೇರುತ್ತಿದ್ದಾರೆ. ಈಗ ನನಗೆ ಬಂದಿರತಕ್ಕ ವರ್ತಮಾನದ ಪ್ರಕಾರ ಪ್ರತಿದಿವಸ ಬೆಂಗಳೂರಿನಲ್ಲಿ 50 ಕುಟುಂಬಗಳು ಜಾಸ್ತಿಯಾಗುತ್ತಿವೆ.

ಅಲ್ಲದೆ ಈಚೆಗೆ ಮೈಸೂರು ದೇಶದಲ್ಲಿ ಆದಂಥ ಏಕೀಕರಣ ಇತ್ಯಾದಿ ಮತ್ತು ಸರಕಾರದವರು ಕಲ್ಪಿಸಿರತಕ್ಕ ವಿದ್ಯಾಮಂದಿರಗಳು ಇವುಗಳಿಂದ ಜನಸಂಖ್ಯೆ ವಿಶೇಷವಾಗಿ ಬೆಳೆಯುತ್ತಾ ಇದೆ. ಹೀಗಿರುವಾಗ ಈ ಎಲ್ಲಾ ಏರ್ಪಾಡುಗಳು ಇದ್ದರೂ, ವಿದ್ಯುಚ್ಛಕ್ತಿ, ಒಳ್ಳೆಯ ರಸ್ತೆಗಳು, ಹೊಟೇಲುಗಳು ಇದ್ದರೂ ಕೂಡ, ನೀರಿನ ಒಂದು ವಿಚಾರದಲ್ಲಿ ಬೆಂಗಳೂರು ನಗರಕ್ಕೆ ಒಂದು ಕೊರತೆ ಇದೆ. ಮೊದಲು ಕೆಂಪೇಗೌಡರು ಈ ಪಟ್ಟಣ ನಿರ್ಮಾಣಮಾಡಿದ ಕಾಲದಲ್ಲಿ ನೀರಿನ ಬಾವಿಗಳ ಏರ್ಪಾಡು ಮಾಡಿದ್ದರು. ಆ ಮೇಲೆ ಹೆನರುಘಟ್ಟದಿಂದ ನೀರನ್ನು ನರಬರಾಯಿ ಮಾಡುವುದಕ್ಕೆಪ್ರಾರಂಭವಾಗಿ ಅವು ಮುಚ್ಚಿಹೋದವು. ಹೆನರುಘಟ್ಟದ ನೀರು

ಸಾಲದು ಎಂದು ಆಮೇಲೆ ತಿಪ್ಪಗೊಂಡನಹಳ್ಳಿಯಿಂದ ಹಂತಹಂತವಾಗಿ ನೀರು ಸರಬರಾಯಿ ಮಾಡಬೇಕೆಂದು ಜರಾತಯುವನ್ನು ತಯಾರುಮಾಡಿದರು. ಈಗ ತಿಪ್ಪಗೊಂಡನಹಳ್ಳಿ ಮತ್ತು ಹೆಸರುಘಟ್ಟ ಇವೆರಡರಿಂದಲೂ ನೀರು ಬೆಂಗಳೂರಿಗೆ ಸಾಲುವುದಿಲ್ಲ ಎಂದು ವಿಧವಿಧವಾಗಿ ಜನರು ಹೇಳುತ್ತಾರೆ. ಈಗ ಬೆಂಗಳೂರಿನಲ್ಲಿ ಜನರಿಗೆ ಸರಾಸರಿ ಎಷ್ಟು ನೀರು ಒದಗುತ್ತಾ ಇದೆ ಎಂದು ಲೆಕ್ಕಾಚಾರ ಮಾಡಿದರೆ ಸುಮಾರು 10 ಗ್ಯಾಲನ್ ಒದಗುತ್ತದೆ. ಹೇಗೆ ಲೆಕ್ಕಾಚಾರ ಹಾಕಿದ್ದೇನೆ ಎಂದರೆ ಈಗಿರತಕ್ಕ ಸುಮಾರು ಹದಿನಾಲ್ಕು ಮಿಲಿಯನ್ ಗ್ಯಾಲನ್ ತಿಪ್ಪಗೊಂಡನಹಳ್ಳಿಯಿಂದ ಸುಮಾರು ಮೂರು ಮಿಲಿಯನ್ ಗ್ಯಾಲನ್ ಹೆಸರು ಘಟ್ಟದಿಂದ ಬರುತ್ತಾ ಇದೆ. ಈ ಹದಿನೇಳು ಮಿಲಿಯನ್ ಗ್ಯಾಲನ್ ಪೈಕಿ ಫ್ಯಾಕ್ಟರಿಗಳಿಗೆ ಕೊಡಬೇಕಾಗಿರುವುದು ಸುಮಾರು 3 ಮಿಲಿಯನ್ ಗ್ಯಾಲನ್; ಇದು ಹೋದರೆ 14 ಮಿಲಿಯನ್ ಗ್ಯಾಲನ್ ಈ ಪಟ್ಟಣದಲ್ಲಿರುವ ಹದಿನಾಲ್ಕು, ಹದಿನೈದು ಲಕ್ಷ ಪ್ರಜೆಗಳಿಗೆ ಒದಗಿಸಿದರೆ ನಮಗೆ ಸರಾಸರಿ ಹತ್ತು ಗ್ಯಾಲನ್ ನೀರು ಸಿಕ್ಕುತ್ತದೆ. ಈ ಹತ್ತು ಗ್ಯಾಲನ್ ನೀರು ಏನೇನೂ ಸಾಲದು ಎಂಬುದು ನಿರ್ವಿವಾದವಾದ ಮಾತು. ಮದರಾಸಿನಲ್ಲಿ ಸರಾಸರಿ ಇಪ್ಪತ್ತು ಗ್ಯಾಲನ್ ನೀರು ಜನರಿಗೆ ಒದಗಿಸುತ್ತಾರೆ. ಸರಾಸರಿ ತಲೆಗೆ ೨೦ ಗ್ಯಾಲನ್. ಹಾಗೆಯೇ ಬೊಂಬಾಯ್‌ನಲ್ಲಿ ೪೦ ಗ್ಯಾಲನ್ ನೀರು ಒದಗಿಸುತ್ತಾರೆ. ದೆಹಲಿಯಲ್ಲಿ ೮೦ ಗ್ಯಾಲನ್ ನೀರು ಒದಗಿಸುತ್ತಾರೆ. ಮದರಾಸಿನಲ್ಲಿ ೨೦ ಗ್ಯಾಲನ್ ಒದಗಿಸಿದರೂ ಕೂಡ ನೀರಿನ ವ್ಯವಸ್ಥೆ ಪರಿಯಾಗಿಲ್ಲ, ನೀರು ಸಾಲದು ಅಂತ ಕನಿಷ್ಟ ಪಕ್ಷ ೫೦ ಗ್ಯಾಲನ್ ನೀರು ಒದಗಿಸಿದರೆ ಅದು ಸರಿಯಾದ ನೀತಿ, ಸಾಕಾದಷ್ಟು ನೀರು ಒದಗಿಸಿದ ಹಾಗಾಗುತ್ತದೆ ಅಂತಹ ಪಟ್ಟಣಗಳಿಗೆ ಅಂತ ಹೇಳಿ ತಜ್ಞರು ಹೇಳುತ್ತಾರೆ. ಈಗ ಮದರಾಸಿನಲ್ಲಿ ೨೦ ಗ್ಯಾಲನ್ ನಮ್ಮ ನಗರದಲ್ಲಿ ಸಿಕ್ಕುವುದು ಕೇವಲ ೧೦ ಗ್ಯಾಲನ್. ಇದನ್ನು ಉಪಯೋಗಿಸುತ್ತಾ ಇರತಕ್ಕ ಜನ ಹೇಗೆ ಬದುಕುತ್ತಾರೆ ಎಂಬುದನ್ನು ನೋಡುವುದಾದರೆ ಪ್ರತಿದಿನ ನಲ್ಲಿಗಳ ಹತ್ತಿರ ಅದನ್ನು ನೋಡಬೇಕು. ನಲ್ಲಿಗಳ ಹತ್ತಿರ ಹತ್ತಾರು ಜನ ಸೇರಿಕೊಂಡು, ಒಬ್ಬರಿಗೊಬ್ಬರಿಗೆ ಪೈಪೋಟಿ, ಕಿತ್ತಾಟ, ಜಗಳ ಆಗುತ್ತಿರುವುದನ್ನು ಹಾಸ್ಯವಾಗಿ ಹೇಳುತ್ತಾರೆ. ಬೆಂಗಳೂರು ಪಟ್ಟಣದಲ್ಲಿ ಜನ, ನಲ್ಲಿ ಮುಂದೆ ಇಷ್ಟೊಂದು ಹೆಂಗಸರು ಒಬ್ಬರಿಗೊಬ್ಬರು ಕಾದಾಡುತ್ತಾ, ಜಗಳವಾಡುತ್ತಾ ಇರುತ್ತಾರೆ, ಏನಾದರೂ ಮುಂದೆ ಯುದ್ಧ ಪ್ರಾಪ್ತವಾದರೆ ಅದಕ್ಕೆ ಅಭ್ಯಾಸ ಮಾಡುತ್ತಾರೆಯೋ ಏನೋ ಎಂದು ವಿನೋದವಾಗಿ ಹೇಳುತ್ತಾರೆ. ಮಡಕೆ ಒಡೆದುಕೊಂಡು, ವ್ಯಾಜ್ಯ ಆಗುತ್ತಾ ಇರತಕ್ಕ ದೃಶ್ಯ ಬಹಳ ಶೋಚನೀಯವಾದ ದೃಶ್ಯ. ಬೆಂಗಳೂರು ಕಾರ್ಪೊರೇಷನ್‌ನವರು ಬಹಳ ಸ್ಥೈರ್ಯದಿಂದ ೨೦ ರಾರಿಗಳಲ್ಲಿ ಎಲ್ಲಿ ನೀರಿನ ಅಭಾವ ಇದೆಯೋ ಅಲ್ಲಿಗೆ ಒದಗಿಸುತ್ತಾ ಇದ್ದಾರೆ. ಕಾರ್ಪೊರೇಷನ್‌ನವರ ಈ ಒಂದು ಸಾಹಸಕ್ಕೆ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಬೇಕಾಗಿದೆ. ಬೆಂಗಳೂರು ನಗರಕ್ಕೆ ಆದಷ್ಟು ಜಾಗ್ರತೆ ನೀರು ಒದಗಿಸಬೇಕಾದ್ದು ಬಹಳ ಅಗತ್ಯ. ಎಷ್ಟು ಜಾಗ್ರತೆ ನೀರನ್ನು ಹೆಚ್ಚಾಗಿ ಒದಗಿಸುತ್ತೇವೆಯೋ ಅಷ್ಟೂ ಸಾಧುವಾದದ್ದು, ಧರ್ಮವಾದ ಕೆಲಸ, ನ್ಯಾಯವಾದ ಕೆಲಸ ಎಂದು ನಾನಾದರೂ ಹೇಳಬಯಸುತ್ತೇನೆ.

ಮದರಾಸಿನಲ್ಲಿ ಸರಾಸರಿ ೨೦ ಗ್ಯಾಲನ್ ಒದಗಿಸಿದರೆ ಸಾಲದು ಎಂದು ಮದರಾಸ್ ಕಾರ್ಪೊರೇಷನ್‌ನವರು ಕಾವೇರಿ ನದಿಯಿಂದ ನೀರ್ ಒದಗಿಸಿಕೊಳ್ಳುವುದಕ್ಕೆ ಸನ್ನಾಹ ಮಾಡುತ್ತಾ ಇದ್ದಾರೆ ಎಂದು ನಮಗಾದರೂ ವರ್ತಮಾನ ಬಂದಿದೆ. ಈಗ ಸರ್ಕಾರದವರು 3 ನೇ ಯೋಜನೆಗಳನ್ನ ಹಾಕಿಕೊಂಡು ಈ ಯೋಜನೆಗಳಲ್ಲಿ ಯಾವುದು ಸಾಧುವಾದುದು, ಏನು ಮಾಡಿದರೆ ಸರಿಯಾಗುತ್ತದೆ, ನೀರಿನ ಸೌಕರ್ಯ ಹೇಗೆ ಹೆಚ್ಚಿಸಬಹುದು ಎಂದು ಯೋಚನೆ ಮಾಡುತ್ತಾ ಇದ್ದಾರೆ. ತಾತ್ಕಾಲಿಕವಾಗಿ ತಿಪ್ಪಗೊಂಡನಹಳ್ಳಿಯಿಂದ ಚಾಮರಾಜ ವಾಟರ್ ವರ್ಕ್ಸ್‌ಗೆ 3ನೇ ಪೈಪ್ ಲೈನ್ ಹಾಕಿ ನೀರು ಒದಗಿಸಬೇಕೆಂದು ಉದ್ದೇಶ ಪಟ್ಟಿದ್ದಾರೆ. ಆದಷ್ಟು ಜಾಗ್ರತೆ ಈ ಮೂರನೇ ಪೈಪ್‌ಲೈನ್ ಕೆಲಸ ಮಾಡಿ ಮುಗಿಸಿ ಬೆಂಗಳೂರಿಗೆ ನೀರು ಒದಗಿಸುತ್ತೇವೆ ಎಂದು ನಮಗೆ ಆಶ್ವಾಸನ ಕೊಟ್ಟಿದ್ದಾರೆ. ಅಲ್ಲಿಂದ ನೀರು ಒದಗಿಸಿದರೂ ಕೂಡ ನಮಗೆ ತಲೆ ಒಂದಕ್ಕೆ ಐದು ಅಥವಾ ಆರು ಗ್ಯಾಲನ್ ನೀರು ಇನ್ನೂ ಜಾಸ್ತಿ ಆಗಬಹುದೇನಿವಾ ನಾಗರಿಕರಿಗೆ ಸಾಕಾದಷ್ಟು ನೀರು ಒದಗಿಸಲು ಸಾಧ್ಯವಾಗುವುದಿಲ್ಲ. ತಾತ್ಕಾಲಿಕವಾಗಿ ಬೇಕಾಗುವಷ್ಟು ಮಟ್ಟಿಗೆ ಒಂದು ಸಹಾಯವಾಗಬಹುದು. ಕೂಡಲೇ ಮತ್ತೆ ಯಾವುದಾದರೂ ತೀರ್ಮಾನ ತೆಗೆದುಕೊಂಡು ಉತ್ತಮವಾದ, ಯೋಗ್ಯವಾದ ಒಂದು ಯೋಜನೆಯನ್ನು ಸರ್ಕಾರದವರು ಕೈಕೊಳ್ಳಬೇಕಾದ್ದು ಅನಿವಾರ್ಯ. ಈಗ ಸರ್ಕಾರದವರು ಯೋಚನೆ ಮಾಡುತ್ತಾ ಇರತಕ್ಕ ಪ್ರಾಜೆಕ್ಟುಗಳು ಮೂರು. ಮೊದಲನೆಯದು ಹಳ್ಳಿಮಾಲಾ ಯೋಜನೆ, ಎರಡನೆಯದು ಶಿಂಷಾಯೋಜನೆ, ಮೂರನೆಯದು ಕಾವೇರಿ ನದಿಯಿಂದ ನೀರು ತರುವುದು. ಇದರಲ್ಲಿ ಹಳ್ಳಿಮಾಲಾ ಯೋಜನೆಗೆ ಸುಮಾರು ಹತ್ತು ಕೋಟಿ ರೂಪಾಯಿ, ಶಿಂಷಾಯೋಜನೆಗೆ ಸುಮಾರು ಹತ್ತು ಕೋಟಿ ರೂಪಾಯಿ, ಕಾವೇರಿ ಯೋಜನೆಗೆ ೨೦-೨೨ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ ಎಂದು ನನಗೆ ಗೊತ್ತಾಗಿದೆ. ಹಳ್ಳಿಮಾಲಾ ಯೋಜನೆಯ ವಿಚಾರವಾಗಿ ಸ್ವಲ್ಪ ದೀರ್ಘವಾಗಿ ಪ್ರಸ್ತಾಪ ಮಾಡಬೇಕಾಗಿದೆ. ಏಕೆಂದರೆ ಹಳ್ಳಿಮಾಲಾ ಇರತಕ್ಕ ರಾಮನಗರದ ಕ್ಷೇತ್ರದಿಂದ ನಾನು ಮೆಂಬರಾಗಿ ಬಂದಿದ್ದೇನೆ. ಅಲ್ಲಿ ಏನು ತೊಂದರೆ ಇದೆ, ಅಲ್ಲಿ ಜನರಿಗೆ ಆಗತಕ್ಕ ಕಷ್ಟನಷ್ಟ ಏನು ಎಂಬುದನ್ನು ಸರ್ಕಾರದವರಿಗೂ ಮತ್ತು ಮಾನ್ಯ ಸದಸ್ಯರಿಗೂ ಮನದಟ್ಟು ಮಾಡಿದರೆ ಬಹುಮಟ್ಟಿಗೆ ಈ ಹಳ್ಳಿಮಾಲಾ ಯೋಜನೆಯನ್ನು ಆದಷ್ಟು ಜಾಗ್ರತೆ ಕೈಗೆಬಿಡುವುದು ಅಥವಾ ಆ ಯೋಚನೆಯನ್ನು ಸರ್ಕಾರ ಅಂಟಿಸಿಕೊಳ್ಳದೇ ಇರುವುದು ಕ್ಷೇಮ ಎಂಬುದು ವ್ಯಕ್ತಪಡುತ್ತದೆ. ಆದ್ದರಿಂದ ಆ ವಿಚಾರವಾಗಿ ನಾನು ಹೆಚ್ಚು ವಿಷಯಗಳನ್ನು ಸರ್ಕಾರದವರಿಗೆ ಹೇಳಬೇಕಾಗುತ್ತದೆ, ಒಂದು ವೇಳೆ ಹಳ್ಳಿಮಾಲಾ ಯೋಜನೆಯನ್ನು ಸರ್ಕಾರದವರು ಕೈಕೊಂಡದ್ದೇ ಆದರೆ ಎಷ್ಟು ವರ್ಷಗಳವರೆಗೆ ಅದರ ಪ್ರಯೋಜನ ಬೆಂಗಳೂರಿಗೆ ಸಿಕ್ಕಬಹುದು, ಎಷ್ಟು ಹೆಚ್ಚು ನೀರು ಸಿಕ್ಕಬಹುದು, ಆಗತಕ್ಕ ಹಣ ಸದುಪಯೋಗವಾಗುತ್ತದೆಯೇ ಎಂಬುದನ್ನು ಕೂಡ ಯೋಚನೆ ಮಾಡಬೇಕಾಗುತ್ತದೆ. ಹಳ್ಳಿಮಾಲಾ ಯೋಜನೆಯಿಂದ ಅಲ್ಲಿನ ಪರಿಸ್ಥಿತಿ ನೋಡಿದರೆ ಅಮ್ಮಮ್ಮ ಎಂದರೆ ಇನ್ನೂ ಹತ್ತು ವರ್ಷಗಳ ಕಾಲಕ್ಕೆ ಮಾತ್ರ ನೀರು ಸಿಕ್ಕಬಹುದು. ಆಮೇಲಾದರೂ ಅವರ ಅಭಿಪ್ರಾಯದ ಪ್ರಕಾರ ಶಿಂಷಾ ಅಥವಾ ಕಾವೇರಿ ನದಿ ನೀರಿಗೆ ಹೋಗಲೇಬೇಕು. 10 ಕೋಟಿ ರೂಪಾಯಿ ಖರ್ಚು ಮಾಡಿದರೂ ಕೂಡ ಅದರಿಂದ ದೀರ್ಘಕಾಲದವರೆಗೆ ಬೆಂಗಳೂರು ಪಟ್ಟಣಕ್ಕೆ ನೀರು ಸರಬರಾಯಿ ಮಾಡಲು ಸಾಧ್ಯವಾ

(ಶ್ರೀ ಟಿ. ಮಾದಯ್ಯಗೌಡ)

ಗುವುದಿಲ್ಲ. ಯಾವತ್ತು ಇದ್ದರೂ ಕಾವೇರಿ ನದಿಯಿಂದಲೇ ಬೆಂಗಳೂರು ನಗರಕ್ಕೆ ನೀರು ಸರಬರಾಯಿ ಆಗಬೇಕು. ಆದ್ದರಿಂದ ಈಗ ಹಳ್ಳಿಮಾಲಾ ಯೋಜನೆಯನ್ನು ಪ್ರಾರಂಭ ಮಾಡೋಣ ಎನ್ನುವುದರಲ್ಲಿ ಅರ್ಥವಿಲ್ಲ. ಅದರಿಂದ ಸರಾಸರಿ ತಲೆಯೊಂದಕ್ಕೆ ೪೦ ಅಥವಾ ೫೦ ಗ್ಯಾಲ್ ನೀರು ಬೆಂಗಳೂರು ನಗರಕ್ಕೆ ಏನು ಬೇಕಾಗುತ್ತದೆಯೋ ಅದನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ಇದನ್ನು ಸರ್ಕಾರದವರು ದೀರ್ಘವಾಗಿಯೂ ಕೂಲಂಕಷವಾಗಿಯೂ ವಿಚಾರ ಮಾಡಬೇಕಾದುದು ಬಹಳ ಅಗತ್ಯ. ಹಳ್ಳಿಮಾಲಾ ಎನ್ನತಕ್ಕ ಪ್ರದೇಶಕ್ಕೆ ತಿಪ್ಪಗೊಂಡನಹಳ್ಳಿಯಿಂದ ಅರ್ಕಾವತಿ ನದಿ ಬರುತ್ತದೆ. ಈ ಪ್ರದೇಶ ಹತ್ತು ಹನ್ನೆರಡು ಮೈಲಿಗಳಷ್ಟಿದೆ. ತಿಪ್ಪಗೊಂಡನಹಳ್ಳಿಯಲ್ಲಿ ಹೆಚ್ಚು ನೀರು ಶೇಖರವಾಗಿ, ಕಟ್ಟಬಹುದಾದ ಹಳ್ಳಿಮಾಲಾ ಜಲಾಶಯಕ್ಕೆ ಸುಮಾರು 25 ಲಕ್ಷ ಯೂನಿಟ್ ನೀರು ಒದಗಬಹುದು. ಇದೂ ಕೇವಲ ಕದಮೆ ಎಂದು ತಜ್ಞರು ಹೇಳುತ್ತಾರೆ, ನನಗೂ ಹಾಗೆಯೇ ಎಂದು ಕಾಣುತ್ತದೆ. ಹಳ್ಳಿಮಾಲಾ ಯೋಜನೆಯನ್ನು ತೆಗೆದುಕೊಂಡರೆ ಎಂಟು ಹತ್ತು ವರ್ಷಗಳಲ್ಲಿ ಅದರಿಂದ ಸರಬರಾಜಾಗುವ ನೀರೂ ಸಾಲದೆ ಬರುತ್ತದೆ, ಆಗ ಮತ್ತೆ ಬೇರೆ ಯೋಜನೆಯನ್ನು ಮಾಡಬೇಕಾಗುತ್ತದೆ. ಆದುದರಿಂದ ಈಗಲೇ ಅದನ್ನು ನಿಲ್ಲಿಸಿ ಕಾವೇರಿಯಿಂದ ನೀರು ತರುವ ಯೋಜನೆಯನ್ನ ತೆಗೆದುಕೊಳ್ಳುವುದು ಒಳ್ಳೆಯದು.

[MR. DEPUTY SPEAKER in the Chair.]

ಹಳ್ಳಿಮಾಲಾ ಯೋಜನೆಯಿಂದ ಜನರಿಗೂ ತೊಂದರೆಯಾಗುತ್ತದೆ. ಇದರಿಂದ ಸುಮಾರು ೫೫ ಗ್ರಾಮಗಳು ಮುಳುಗಡೆಯಾಗುತ್ತವೆ. ಅವು ಎಂಥ ಗ್ರಾಮಗಳೆಂದರೆ, ರಾಮನಗರ ತಾಲ್ಲೂಕಿನಲ್ಲೇ ಅತ್ಯುತ್ತಮವಾದ ಜಮೀನಿರುವ ಗ್ರಾಮಗಳು. ಅಲ್ಲಿ ಸಾವಿರಾರು ಎಕರೆ ಒಳ್ಳೆಯ ಮಾವು, ತೆಂಗು, ಉಪ್ಪು ನೀರಲೆ ಬೆಳೆಗಳಿರುವ ಜಾಗ. ಇಡೀ ಅರ್ಕಾವತಿ ವ್ಯಾಲಿಯಲ್ಲೇ ಅಷ್ಟು ಒಳ್ಳೆಯ ಜಮೀನಿಲ್ಲ. ಅದು ಚಿನ್ನವನ್ನು ಬೆಳೆಯುವ ಪ್ರದೇಶವೆಂದು ಹೇಳುತ್ತಾರೆ. ಅಲ್ಲಿ ರೈತರು ಬಹಳ ಕಷ್ಟಪಟ್ಟು ತೋಟಗಳಿಗೆ ವಿದ್ಯುಚ್ಛಕ್ತಿ, ಪಂಪು ಹಾಕಿ ನೀರನ್ನೊದಗಿಸಿಕೊಂಡು ಬಹಳ ಪ್ರಾಮುಖ್ಯವಾದ ಉಪ್ಪುನೀರಲೆ ಬೆಳೆಯನ್ನು ಸುಮಾರು ಆರು ನೂರು, ಏಳು ನೂರು ಎಕರೆಗಳಲ್ಲಿ ಹಾಕಿದ್ದಾರೆ. ಆ ಪ್ರಾಂತದಲ್ಲಿ ಬಿತ್ತನೆಗೂಡಿಗೆ ಬೇಕಾದ ರೇಷ್ಮೆ ಗೂಡು ಸಿಕ್ಕಬೇಕೆಂದು ಸರ್ಕಾರ ಒಂದು ಕಾನೂನು ಮಾಡಿ, ಅದನ್ನು ಒಳ್ಳೆಯ ಬಿತ್ತನೆಗೂಡು ಒದಗಿಸುವ ಪ್ರಾಂತವೆಂದು ಮಾಡಿದ್ದಾರೆ. ಆ ಪ್ರಾಂತ ಮುಳುಗಡೆ ಆದರೆ, ಎಲ್ಲ ಕಾಲದಲ್ಲಿಯೂ ಬಿತ್ತನೆಗೂಡು ಒದಗಿಸುವ ಪ್ರಾಂತ ಹೋದಂತಾಗಿ, ಬಿತ್ತನೆಗೂಡು ಸಿಕ್ಕದೆ ರೇಷ್ಮೆ ಬೆಳೆ ನಮ್ಮ ದೇಶದಲ್ಲಿ ಅನ್ಯಾಕ್ರಾಂತವಾಗಲು ಅವಕಾಶವಾಗುತ್ತದೆ. ನನಗೆ ತಿಳಿದ ಹಾಗೆ ಮೂವತ್ತು ಮೂರು ಗ್ರಾಮಗಳು ಮುಳುಗಡೆಯಾಗುವುದರಿಂದ ಸುಮಾರು ಹತ್ತು ಸಾವಿರ ಜನರು ಮೂಲೋತ್ಪಾಟನವಾಗುತ್ತಾರೆ. ಅವರಿಗೆ ಮನೆ ಜಮೀನು ಅಲ್ಲದೆ ವಸತಿ ಕಲ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರೆಲ್ಲರೂ ಬೀದಿಯ ಭಿಕಾರಿಗಳಾಗಬೇಕಾಗುತ್ತದೆ. ಸರ್ಕಾರದವರು ಅಲ್ಲ ಜಲಾಶಯವನ್ನು ನಿರ್ಮಾಣ ಮಾಡುವುದು ಸುಲಭ; ಆದರೆ ಮುಳುಗಡೆಯಾಗುವ ಪ್ರದೇಶದ ರೈತರನ್ನು ಪುನಃ ಯಾವುದಾದರೂ ರೀತಿಯಲ್ಲಿ ಕಾಪಾಡುವುದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡಬೇಕು. ನಾನು ಅನೇಕ ಕಡೆ ನೋಡಿದ್ದೇನೆ. ಕಣ್ಣಾಜಲಾಶಯದಲ್ಲಿ ಮುಳುಗಡೆಯಾದ ಜಮೀನಿನ ರೈತರಿಗೆ ಪರಿಹಾರವಾಗಿ ಹಣವನ್ನು ಕೊಟ್ಟರು, ಜಮೀನಿಲ್ಲದೇ ಹೋಯಿತು. ಅವರು ಆ ಹಣವನ್ನು ತಿಂದುಹಾಕಿ ಈಹೊತ್ತು ಭಿಕಾರಿಗಳಾಗಿದ್ದಾರೆ. ಹೀಗೆ ಹತ್ತುಸಾವಿರ ಜನರು, ಸುಮಾರು ಇನ್ನೂರು ದೊಡ್ಡ ಕುಟುಂಬಗಳನ್ನು ಹಾಳು ಮಾಡಿ, ಅವರಿಗೆ ಬೇರೆ ವಸತಿ ಕೊಡದೇಯಿರುವುದು ಯಾವ ಸರ್ಕಾರಕ್ಕೂ ನ್ಯಾಯವಲ್ಲ, ಧರ್ಮವಲ್ಲ. ಪರಿಹಾರವನ್ನು ಸುಮಾರು ಮೂವತ್ತು ಮೂವತ್ತೈದು ಲಕ್ಷ ರೂಪಾಯಿ ಕೊಟ್ಟರೂ ಸಾಕಾಗುವುದಿಲ್ಲ. ಕೊನೆಯ ಪಕ್ಷ ಎಕರೆಗೆ ಐದು ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಅವರ ಕಷ್ಟಗಳು ಲೆಕ್ಕವಿಲ್ಲ. ಒಂದು ಕೋಟಿ ರೂಪಾಯಿ ಪರಿಹಾರ ಕೊಡಬೇಕಾದ ನಂದರ್ಭ ಬರುತ್ತದೆ. ಒಂದು ಕೋಟಿ ರೂಪಾಯಿ ಕೊಟ್ಟರೂ ಅವರನ್ನು ಮನೆಮಠಗಳಿಲ್ಲದೆ, ಜಮೀನಿಲ್ಲದೆ ಆಸ್ತಿಪಾಸ್ತಿಗಳನ್ನು ತ್ಯಜಿಸಿ ಎಲ್ಲಿಯಾದರೂ ಹೋಗಿ ಎನ್ನುವುದು ಧರ್ಮವಲ್ಲ, ನೀತಿಯಲ್ಲ. ಹಳ್ಳಿಮಾಲವಲ್ಲದೆ ಇನ್ನೆಲ್ಲಿಯೂ ಇದಕ್ಕೆ ಅವಕಾಶವಿಲ್ಲದೇಯಿದ್ದರೆ ಹೋಗಲಿ, ಬೇರೆ ಮಾರ್ಗವಿಲ್ಲ, ಈ ಜನ ಕಷ್ಟಪಡಲಿ ಎಂದು ಈ ಯೋಜನೆಯನ್ನೇ ಕಾರ್ಯಗತ ಮಾಡಬಹುದಾಗಿತ್ತು. ಆದರೆ ಸೊಗಸಾದ ಕಾವೇರಿ ಯೋಜನೆ ನಮಗಿರುವಾಗ ಹಳ್ಳಿಮಾಲಾ ಯೋಜನೆಯನ್ನು ತೆಗೆದುಕೊಂಡು ಹತ್ತು ಸಾವಿರ ಪ್ರಜೆಗಳನ್ನು ಮೂಲೋತ್ಪಾಟನ ಮಾಡುವುದು ಬಹಳ ಅನ್ಯಾಯವೆಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಕಾವೇರಿನದಿ ಬಹಳ ಉಪಕಾರಮಾಡಿದೆ. ನಮ್ಮ ಸಂಪತ್ತನ್ನು ಅಭಿವೃದ್ಧಿಮಾಡಿದೆ. ಯಾವಾಗಲೂ ಅದರಲ್ಲಿ ನೀರಿದ್ದು ಅದರಿಂದ ನಮ್ಮ ಬೆಂಗಳೂರಿಗೇ ನೀರನ್ನೊದಗಿಸುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. Perennial Water Supplyಗಾಗಿ ಸುಮಾರು ಇಪ್ಪತ್ತು ಇಪ್ಪತ್ತೈರಡು ಕೋಟಿ ರೂಪಾಯಿ ಖರ್ಚಿನಲ್ಲಿ ಯೋಜನೆ ಮಾಡಿ ಕಾರ್ಯಗತ ಮಾಡಿದರೆ ಬಹುಕಾಲ ಈ ನಗರಕ್ಕೆ ನೀರನ್ನೊದಗಿಸಲು ಸಾಧ್ಯವಾಗುತ್ತದೆ. ಹೀಗಿರುವಾಗ ತಾತ್ಕಾಲಿಕವಾದ ಹಳ್ಳಿಮಾಲಾ ಯೋಜನೆಯನ್ನು ಹತ್ತು ಸಾವಿರ ಪ್ರಜೆಗಳಿಗೆ ನಷ್ಟವಾದರೂ ಚಿಂತೆಯಿಲ್ಲವೆಂದು ತೆಗೆದುಕೊಳ್ಳುವುದು ನನಗೆ ಸರಿಯಲ್ಲವೆಂದು ತೋರುತ್ತದೆ. ಶಿಂಷಾ ಯೋಜನೆಯೂ ಒಂದಿದೆ. ಸುಮಾರು ಹತ್ತು ಕೋಟಿ ರೂಪಾಯಿನ ಶಿಂಷಾ ಯೋಜನೆಯನ್ನೂ ಸರ್ಕಾರ ಮಾಡಿರುವ ಹಾಗೆ ಕಾಣುತ್ತದೆ. ಇದರಿಂದಲೂ ಈ ನಗರಕ್ಕೆ ಶಾಶ್ವತವಾಗಿ ನೀರನ್ನೊದಗಿಸುವುದಕ್ಕಾಗುವುದಿಲ್ಲ. ಒಂದೇ ಸಾರಿ ಕಾವೇರಿ ನೀರನ್ನು ತರುವುದಾದರೆ ಇದಕ್ಕಾಗಿ ಸುಮಾರು ೫೫ ಕೋಟಿ ರೂಪಾಯಿ ಒದಗಿಸುವುದು ಕಷ್ಟವಾಗುವುದಿಲ್ಲ. ಈಗ ಸ್ವಲ್ಪ ಮಟ್ಟಿಗೆ ತಿಪ್ಪಗೊಂಡನಹಳ್ಳಿಯಿಂದ ನಗರಕ್ಕೆ ನೀರು ಬರುತ್ತದೆ. ಇನ್ನು ನಾಲ್ಕೈದು ವರ್ಷಗಳಲ್ಲಿ ಕಾವೇರಿಯಿಂದ ನೀರನ್ನು ತರಲು ಪ್ರಯತ್ನಮಾಡಿದರೆ ಶಾಶ್ವತವಾದ ಏರ್ಪಾಡು ಮಾಡಿದ ಹಾಗಾಗುತ್ತದೆ. ಬೇರೆ ಯೋಜನೆಗೆ ಮೊದಲ ಹಂತದಲ್ಲಿ ಖರ್ಚುಮಾಡುವ ಹತ್ತು ಕೋಟಿ ರೂಪಾಯಿಗಳನ್ನು ಕಾವೇರಿ ಯೋಜನೆಗೇ ಖರ್ಚು ಮಾಡಿದರೆ ಜಾಗ್ರತೆ ನೀರನ್ನೊದಗಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಅಲ್ಲದೆ ಕಾವೇರಿಯಿಂದ ತಂದರೆ, ಮುಳುಗಡೆಯ ತೊಂದರೆಗೆ ರೈತರನ್ನು ಗುರಿಮಾಡುವುದು ತಪ್ಪುತ್ತದೆ. ಕೇವಲ

ಒಂದು ಹೈಪ್‌ಲೈಕ್ ತರುವುದರಿಂದ ಪರಿಹಾರ ಕೊಡುವ ಕಷ್ಟವಿರುವುದಿಲ್ಲ. ಮೊದಲು ಏನು ಹಣ ಬೇಕಾಗುತ್ತದೆಯೋ ಅದನ್ನು ಗ್ಯಾಂಟು ಅಥವಾ ಸಾಲದ ರೂಪದಲ್ಲಿ ಕೊಡಲು ಭಾರತ ಸರ್ಕಾರದವರು ಯಾವಾಗಲೂ ಸಿದ್ಧರಾಗಿದ್ದಾರೆಂದು ನನಗೆ ತೋರುತ್ತದೆ. ಈಚೆಗೆ ಪಂಡಿತ್ ನೆಹರೂ ಅವರು ಇಲ್ಲಿಗೆ ದಯಮಾಡಿಸಿದ್ದಾಗ, ಪೌರರು ಈ ವಿಷಯದಲ್ಲಿ ಅವರನ್ನು ಕೇಳಿಕೊಂಡಾಗ ನಗರಕ್ಕೆ ಕಾವೇರಿಯ ನೀರನ್ನು ತರಬಹುದೆಂದು ಆಶ್ವಾಸನೆ ಕೊಟ್ಟಿದ್ದಾರೆ ಹಿಂದೆ ಒಂದು ಸಲ ಸುಗ್ಗನಹಳ್ಳಿ ಪ್ರಾಂತದ ಮುಳುಗಡೆಯಾಗುವ ಪ್ರದೇಶದ ಜನರ ಕಷ್ಟವನ್ನು ನೋಡಿ, ಅಲ್ಲಿಂದ ನೀರನ್ನೊದಗಿಸಿ ಅವರನ್ನು ಕಷ್ಟಕ್ಕೊಳಗು ಮಾಡುವುದು ನ್ಯಾಯವಲ್ಲವೆಂದೂ ಬೇರೆ ಯೋಜನೆ ಮಾಡುವುದು ಉಕ್ತವೆಂದೂ ಅವರು ಹೇಳಿದ್ದರು.

Mr. DEPUTY SPEAKER.—Will the Hon'ble Member conclude his speech ?

ಶ್ರೀ ಟಿ. ಮಾದಯ್ಯ ಗೌಡ.—ಈ ಹೊತ್ತು ಮುಗಿಸುವುದಕ್ಕಾಗುವುದಿಲ್ಲ, ನಾಳೆ ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet tomorrow at 1 P.M.

The House adjourned at Six of the Clock to meet again at One of the Clock on Tuesday, the 31st July 1962.